ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಸೋಮವಾರ, ೧೯ನೇ ಮಾರ್ಚ್ ೧೯೮೪ ಫಾಲ್ಗುಣ ೨೯ ೧೯೦೫ ಶಕ

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ, ಪೂರ್ವಾಹ್ನ ಹನ್ನೊಂದು ಗಂಟೆಗೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಡಿ. ಬಿ ಚಂದ್ರೇಗೌಡ ಪೀಠವನ್ನು ಅಲಂಕರಿಸಿದ್ದರು)]

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ
ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಬಂಟ್ವಾಳ ತಾಲ್ಲೂಕಿನಲ್ಲಿರುವ ಪ್ರಾಥಮಿಕ ಆರೋಗ್ಯ ಘಟಕಗಳು ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳು

೧೦೬೦ ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ) :—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶ್ರೀ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಸಚಿವರು ದಯೆಯಿಟ್ಟು ಉತ್ತರಿಸುವರೆ ?

(ಅ) ಬಂಟ್ವಾಳ ತಾಲ್ಲೂಕಿನಲ್ಲಿ ಪ್ರಾಥಮಿಕ ಆರೋಗ್ಯ ಘಟಕಗಳು ಎಷ್ಟಿವೆ ? ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳು ಎಷ್ಟು ಮತ್ತು ಎಲ್ಲೆಲ್ಲಿದೆ ?

(ಆ) ವಿಟ್ಲದಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮೇಲ್ದರ್ಜೆ ಆರೋಗ್ಯ ಕೇಂದ್ರವನ್ನಾಗಿ ಪರಿವರ್ತಿಸುವ ವಿಚಾರ ಸರಕಾರದವರ ಗಮನದಲ್ಲಿದೆಯೇ ?

(೩) ಹಾಗಿದ್ದಲ್ಲಿ, ಅದನ್ನು ಯಾವಾಗ ಮೇಲ್ದರ್ಜೆಗೇರಿಸಲಾಗುವುದು ?

ಶ್ರೀ ಪಿ. ಜಿ. ಆರ್. ಸಿಂಧ್ಯಾ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಸಚಿವರು).—

(ಅ) ೨ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಬಂಟ್ವಾಳ ತಾಲ್ಲೂಕಿನಲ್ಲಿ ಕೆಲಸ ಮಾಡುತ್ತಾ ಇವೆ. ೧. ಪುಂಜಲಕಟ್ಟೆ ೨. ವಿಟ್ಲ ಕೆಳಗಿನ ೮ ಪ್ರಾಥಮಿಕ ಆರೋಗ್ಯ ಘಟಕಗಳು ಕೆಲಸ ಮಾಡುತ್ತಾ ಇವೆ.

೧. ಕಂರ್ನಾಡು	೫. ಅಡ್ಯನಾಡ್ಕ
೨. ಮಣಿ	೬. ಸಜ್ಜಿಪಾನಾಡು
೩. ಬೆಂಜನಪದವು	೭. ದೈವಸ್ಥಳ
೪. ಮಂಚಿ	೮. ಪೆರುವಾಯಿ

(ಆ) ಇಲ್ಲ

(೩) ಉದ್ಭವಿಸುವುದಿಲ್ಲ

ಶ್ರೀ ಎ. ರುಕ್ಮಯ್ಯ ಪೂಜಾರಿ.—೮ ಪ್ರಾಥಮಿಕ ಆರೋಗ್ಯ ಘಟಕಗಳು ಬಂಟ್ವಾಳ ತಾಲ್ಲೂಕಿನಲ್ಲಿ ಕೆಲಸ ಮಾಡುತ್ತಿವೆ ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಆದರೆ ಪೆರುವಾಯಿಯಲ್ಲಿ ಇಷ್ಟರ

ವರೆಗೆ ಕೆಲಸ ಮಾಡುತ್ತಿದೆ ಎಂದು ಏನು ಹೇಳಿದ್ದಾರೆ, ಅದಕ್ಕೆ ಮಂಜೂರಾತಿ ಸಿಕ್ಕಿರಬಹುದು. ಕೆಲಸ ಪ್ರಾರಂಭ ಮಾಡಿಲ್ಲ. ಕೆಲಸವನ್ನು ಪ್ರಾರಂಭ ಮಾಡದಿರುವುದಕ್ಕೆ ಇರುವಂತಹ ಕಾರಣವಾದರೂ ಏನು ? ಆದಷ್ಟು ಬೇಗ ಕೆಲಸವನ್ನು ಪ್ರಾರಂಭ ಮಾಡುವುದಕ್ಕೆ ಸನ್ಮಾನ್ಯ ಮಂತ್ರಿಗಳು ಸಂಬಂಧಪಟ್ಟ ಅಧಿಕಾರಿಗಳಿಗೆ ಆಜ್ಞೆಯನ್ನು ಏಡುವರೆ ? ಎರಡನೆಯದಾಗಿ ವಿಟ್ಲ್ಲ ಇಡೀ ಕೇತ್ರಕ್ಕೆ ಮುಖ್ಯವಾದ ಕೇಂದ್ರ ಪಟ್ಟಣವಾಗಿದೆ. ಇದು ಇತರೇ ಸಾಧಾರಣ ರೈತರು ಮತ್ತು ಬಡ ಕೂಲಿಕಾರರು ಜಾಸ್ತಿ ಇರುವಂತಹ ಪ್ರದೇಶ. ಅವರಿಗೂ ಅನುಕೂಲವಾಗುವ ದೃಷ್ಟಿಯಿಂದ ವಿಟ್ಲದಲ್ಲಿರುವ ಪ್ರಾಥಮಿಕ ಆರೋಗ್ಯ ಘಟಕ ಸುಸಜ್ಜಿತವಾದ ಆಸ್ಪತ್ರೆಯಾಗಿಲ್ಲ. ಡೆಯೆಟ್ ಮತ್ತು ಎಕ್ಸರೇ ಯೂನಿಟ್ ಹಾಗೂ ಪೋಸ್ಟ್ ಮಾರ್ಟಂ ಶೆಡ್ ಇವುಗಳನ್ನು ಒದಗಿಸುವುದರ ಜೊತೆಗೆ ಸುಸಜ್ಜಿತವಾದ ಉಪಕರಣಗಳನ್ನು ಒದಗಿಸಿ ಪೂರ್ಣ ಪ್ರಮಾಣದ ಆಸ್ಪತ್ರೆಯನ್ನಾಗಿ ಮಾಡುವರೇ ಎಂದು ಕೇಳುತ್ತಿದ್ದೇನೆ.

ಶ್ರೀ ಪಿ.ಜಿ. ಆರ್ ಸಿಂಧ್ಯ.—ಪೆರುವಾಯ ವಿನಲ್ಲಿರುವ ಪ್ರಾಥಮಿಕ ಆರೋಗ್ಯ ಘಟಕವು ಇತ್ತೀಚಿಗೆ ಮಂಜೂರಾಗಿರುವುದರಿಂದ ತಕ್ಷಣವೇ ಕೆಲಸ ಮಾಡುವುದಕ್ಕೆ ಸ್ವಲ್ಪ ತೊಂದರೆ ಇದೆ. ಆದಕ್ಕೆ ವೈದ್ಯರು ಬೇಕಾಗುತ್ತದೆ ಸಿಬ್ಬಂದಿ ವರ್ಗದವರು ಬೇಕಾಗುತ್ತಾರೆ. ಅವರುಗಳನ್ನು ಕೂಡಲೇ ಪೋಸ್ಟ್ ಮಾಡಿ ತಕ್ಷಣ ಆರೋಗ್ಯ ಘಟಕ ಪ್ರಾರಂಭವಾಗುವುದಕ್ಕೆ ಎಲ್ಲ ಕ್ರಮಗಳನ್ನು ತೆಗೆದುಕೊಳ್ಳುತ್ತೇನೆ, ಸಧ್ಯದ ಸ್ಥಿತಿಯಲ್ಲಿ ತಾಲ್ಲೂಕುಮಟ್ಟದಲ್ಲಿ ಮಾತ್ರ ೩೦ ಹಾಸಿಗೆಯುಳ್ಳ ಆಸ್ಪತ್ರೆಯನ್ನು ಮಾಡತಕ್ಕಂತಹ ಉದ್ದೇಶ ಸರ್ಕಾರಕ್ಕೆ ಇದೆ. ಆದರೆ ಮಾನ್ಯ ಸದಸ್ಯರು ವಿಟ್ಲದಲ್ಲಿರುವ ಪ್ರಾಥಮಿಕ ಆರೋಗ್ಯ ಘಟಕವನ್ನು ೩೦ ಹಾಸಿಗೆಯುಳ್ಳ ಸುಸಜ್ಜಿತ ಆಸ್ಪತ್ರೆಯನ್ನಾಗಿ ಮಾಡುಬೇಕೆಂದು ಕೇಳಿದ್ದಾರೆ. ಆ ರೀತಿ ಮಾಡುವುದಕ್ಕೆ ಸ್ವಲ್ಪ ಕಷ್ಟವಾಗುತ್ತದೆ. ಆದರೂ ಮಾನ್ಯ ಸದಸ್ಯರು ಹೇಳಿರತಕ್ಕ ಡಯೆಟ್ ಹಾಗೂ ಎಕ್ಸ್‌ರೇ ಯೂನಿಟ್ ಅನ್ನು ಈ ವರ್ಷವೇ ಮಾಡುವುದಕ್ಕೆ ಸಾಧ್ಯವೇ ಎನ್ನುವುದನ್ನು ಪರಿಶೀಲನೆ ಮಾಡಿ ನೋಡುತ್ತೇನೆ.

ಶ್ರೀ ಎ. ರುಕ್ಮಯ್ಯ ಪೂಜಾರಿ —ಸನ್ಮಾನ್ಯ ಮಂತ್ರಿಗಳಿಗೆ ನನ್ನ ಧನ್ಯವಾದಗಳು.

ಕುಂದಾಪುರ ಸರಕಾರಿ ಆಸ್ಪತ್ರೆಯಲ್ಲಿ ದಾಖಲಾದ ಒಳರೋಗಿಗಳು ಹಾಗೂ ಹೊರ ರೋಗಿಗಳು

೧೦೭೯ ಶ್ರೀ ಪ್ರತಾಪಚಂದ್ರಶೆಟ್ಟಿ (ಕುಂದಾಪುರ).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ದಯವಿಟ್ಟು ಸಚಿವರು ಉತ್ತರಿಸುವರೆ ?

(ಅ) ಕುಂದಾಪುರ ಸರ್ಕಾರಿ ಆಸ್ಪತ್ರೆಯಲ್ಲಿ ದಾಖಲಾದ ಒಳರೋಗಿ ಮತ್ತು ಹೊರರೋಗಿಗಳ ಸಂಖ್ಯೆ ಎಷ್ಟು ? (೧-೧-೧೯೮೩ ರಿಂದ ೧-೧-೧೯೮೪ರವರೆಗೆ ವಿವರ ಕಳಿಸುವುದು)

(ಆ) ಕುಂದಾಪುರ ಸರ್ಕಾರಿ ಆಸ್ಪತ್ರೆಗೆ ಕಳಿಸಿದ ಔಷಧಿಯ ವೆಚ್ಚವೆಷ್ಟು ? (೧-೧-೧೯೮೩ ರಿಂದ ೧-೧-೧೯೮೪ರವರೆಗೆ ವಿವರ ತಿಳಿಸುವುದು)

(ಇ) ಔಷಧಿಯಲ್ಲದೆ ಇತರ ಬಾಬ್ತುಗಳಿಗೆ ಖರ್ಚು ಮಾಡಿದ ವೆಚ್ಚವೆಷ್ಟು ? (೧-೧-೧೯೮೩ ರಿಂದ ೧-೧-೧೯೮೪ರವರೆಗೆ)

(ಈ) ಕುಂದಾಪುರ ಆಸ್ಪತ್ರೆಯಲ್ಲಿ ಕೆಲಸ ಮಾಡಿದ ಸಿಬ್ಬಂದಿಗಳಿಗಾಗುವ ತಗಲುವ ವೆಚ ವೆಷ್ಟು (೧-೧-೧೯೮೩ ರಿಂದ ೧-೧-೧೯೮೪ರವರೆಗೆ ವಿವರವನ್ನು ಕೊಡುವುದು ?)

ಶ್ರೀ ಪಿ.ಜಿ.ಆರ್. ಸಿಂಧ್ಯ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಮಂತ್ರಿಗಳು).—

(ಅ) ಒಳರೋಗಿ ಸಂಖ್ಯೆ : ೨,೮೯೦
ಹೊರರೋಗಿಗಳ ಸಂಖ್ಯೆ : ೬೬,೩೪೬

(ಆ) ರೂ. ೯೧,೩೧೫-೦೦

೨-೪-೧೯೮೩ ರಂದು	೬,೬೧೪-೫೮
೨೩-೭-೧೯೮೩ ರಂದು	೪೩,೧೩೧-೫೩
೨೭-೧೨-೧೯೮೩ ರಂದು	೧೮,೨೬೩-೨೪